# 27. ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಪುನೇದಹಳ್ಳಿ

**ಕಲಿಕಾಕರ್ಷಣೆ :–**

**ಶಾಲಾ ಮಾಹಿತಿ :** " ಶಿಕ್ಷಣದಲ್ಲಿನ ಹೊಸತನ ಮಕ್ಕಳ ಕಲಿಕೆಯಲ್ಲಿ ಚೇತನ" ಧ್ಯೇಯವಾಕ್ಯದೊಂದಿಗೆ ಹೆಜ್ಜೆ ಇಡುತ್ತಿರುವ ಶಿಕಾರಿಪುರ ತಾಲ್ಲೂಕಿನ ಕುಮದ್ವತಿ ನದಿಯ ತಟದಲ್ಲಿರುವ ಅಕ್ಕಮಹಾದೇವಿ ಜನ್ಮ ಸ್ಥಳದ ಸಮೀಪದಲ್ಲಿನ ಪುಣ್ಯದ ಭೂಮಿ, ಸರ್ಕಾರಿ ಉನ್ನತೀಕರಿಸಿದ ಪ್ರಾಥಮಿಕ ಶಾಲೆ, ಪುನೇದಹಳ್ಳಿಯಲ್ಲಿ 8 ಕೊಠಡಿಗಳಿದ್ದು 8 ಜನ ಶಿಕ್ಷಕರಿದ್ದು ಇದರಲ್ಲಿ 5 ಕೊಠಡಿಗಳ ಮೇಲೆ ವರ್ಣರಂಜಿತವಾದ ಕರ್ನಾಟಕದಲ್ಲಿಯೇ ಅತೀ ಉದ್ದನೆಯ ವರ್ಣರಂಜಿತವಾದ ರೈಲು ಮಕ್ಕಳನ್ನು ಆಕರ್ಷಿಸಿ ಮಕ್ಕಳ ಹಾಜರಾತಿಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದೆ.
















**ಸಹಕಾರ :–** ಈ ಒಂದು ಅದ್ಭುತ ಯೋಜನೆಯು ಸಾಕಾರಗೊಳ್ಳಲು ಶಾಲಾಭಿವೃದ್ಧಿ ಸಮಿತಿ ಸಮುದಾಯದ ಸಹಕಾರ ಹಾಗೂ ಶಿಕ್ಷಕರ ಸಹಕಾರದೊಂದಿಗೆ ಸುಮಾರು ಒಂದು ಲಕ್ಷ ರೂ.ಗಳೊಂದಿಗೆ ರೈಲಿನ ಚಿತ್ರದ ಜೊತೆಗೆ ಸರ್ಕಾರಿ ಬಸ್ಸನ್ನು ನೆನಪಿಸುವಂತಹ ಸುಂದರ ಹಾಗೂ ಮಕ್ಕಳು ಆಕರ್ಷಿತರಾಗಿ ಶಾಲೆಗೆ ಬರುವ ಸಲುವಾಗಿ ಎರಡು ಕೊಠಡಿಗಳಿಗೆ ಕೆಎಸ್‌ಆರ್‌ಟಿಸಿ ಬಸ್‌ನ ಚಿತ್ರವು ಮಕ್ಕಳ ಹಾಜರಾತಿಯನ್ನು ಇಮ್ಮಡಿಗೊಳಿಸಿದೆ.

**ಚಿಣ್ಣರ ಚಿಲಿಪಿಲಿ :–** ಸಂತಸದ ಕಲಿಕೆ, ಚಟುವಟಿಕೆಗೆ ಆಧಾರಿತ ಕಲಿಕೆ, ಸ್ವ–ಕಲಿಕೆ ಇವು ನಲಿಕಲಿಯ ಆಶಯದ ನುಡಿಗಳು ಇವುಗಳನ್ನು ಈಡೇರಿಸಲು ಸಮುದಾಯದ ಹಾಗೂ ಶಿಕ್ಷಕರ ಸಹಕಾರದಿಂದ ಮಕ್ಕಳಿಗೆ ಕುಳಿತುಕೊಳ್ಳಲು ಆಸನದ ವ್ಯವಸ್ತೆ ಟೇಬಲ್ ವ್ಯವಸ್ಥೆಮಾಡಿದ್ದು ಕಲಿಕಾ ಚಪ್ಪರ, ಹವಾಮಾನ ನಕ್ಷೆ, ಕಲಿಕೋಪಕರಣಗಳು, ಪೊಪೆಟ್ ಶೋ, ಪ್ರತಿ ಮಗುವಿಗೂ ವಾಲ್ ಸ್ಲೇಟ್‌ನ್ನು ರೂಪಿಸಿ ಮಕ್ಕಳಿಗೆ ಕಲಿಕಾ ಪೂರಕ ವಾತಾವರಣವನ್ನು ಸೃಷ್ಟಿಸುವುದರ ಮೂಲಕ ರಾಜ್ಯ ಸಂಪನ್ಮೂಲ ವ್ಯಕ್ತಿಗಳ ಪ್ರಶಂಸೆಗೆ ಪಾತ್ರವಾಗಿದೆ. ಇವುಗಳನ್ನು ವೀಕ್ಷಿಸಲು ಉಪನಿರ್ದೇಶಕರು, ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ಭೇಟಿ ನೀಡಿ ಪ್ರಶಂಸೆ ವ್ಯಕ್ತ ಪಡಿಸಿದ್ದಾರೆ.



## English Corner :-

ಮಕ್ಕಳಿಗೆ ಕಬ್ಬಿಣದ ಕಡಲೆಯಾಗಿರುವ ಇಂಗ್ಲೀಷ್‌ನ್ನು ಅತೀ ಸುಲಭ ರೀತಿಯಲ್ಲಿ ಕಲಿಯಲು ಹಾಗೂ ಇಂಗ್ಲೀಷ್ ಭಾಷಾ ವಾತವರಣ ಮತ್ತು ಸರಳ ಕಲಿಕೆ ಗ್ರಾಮೀಣ ಭಾಗದ ಮಕ್ಕಳಿಗೆ ಸಿಗಲೆಂಬ ಉದ್ದೇಶದಿಂದ ನಮ್ಮ ಶಾಲೆಯ ಜಿ ಪಿ ಟಿ ಶಿಕ್ಷಕಿಯಾದ ಕು.ಶಿಲ್ಪರವರು ತಮ್ಮ ಸಹೋದ್ಯೋಗಿಗಳ ಸಹಕಾರದೊಂದಿಗೆ ಒಂದು ಕೊಠಡಿಯನ್ನು ಇಂಗ್ಲೀಷ್ ಕಲಿಕಾ ಕೇಂದ್ರವಾಗಿಸಿಕೊಂಡು ಸರಳವಾಗಿ ಇಂಗ್ಲೀಷ್ ಕಲಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ.

